ಆವಕ್- /2018-19

ಜಿಲ್ಲಾ ಹಿಂದುಳಿದ ವರ್ಗಗಳ
ಕಲ್ಯಾಣ ಅಧಿಕಾರಿಗಳ ಕಛೇರಿ

ದೂರವಾಣಿ ಸಂಖ್ಯೆ 08472-212336
ಫ್ಯಾಕ್ಸ್ ಸಂಖ್ಯೆ
ಇಮೇಲ್: ksrpe6bn@ksp.gov.in

ಕಮಾಂಡೆಂಟ್ ರವರ ಕಛೇರಿ
6ನೇ ಪಡೆ ಕೆ.ಎಸ್.ಆರ್.ಪಿ.
ಕಲಬುರಗಿ - 585 104

ಕರ್ನಾಟಕ ಸರಕಾರ
ಪೊಲೀಸ್ ಇಲಾಖೆ

ಸಂಖ್ಯೆ:ಸಿಬ್ಬಂದಿ-1/ಪಿಸಿ/ ನಾನ್-ಲೋಕಲ್/ನೇಮಕಾತಿ/2018-19 ದಿನಾಂಕ: 27/11/2018

## ನೇಮಕಾತಿ ಆದೇಶ

ವಿಷಯ:- ಕೆ.ಎಸ್.ಆರ್.ಪಿ.6ನೇ ಪಡೆಯ ರಿಸರ್ವ್ ಪೊಲೀಸ್ ಕಾನ್ಸ್‌ಟೇಬಲ್ (ಸ್ಥಳೀಯೇತರ) ಹುದ್ದೆಗೆ ನೇಮಕ ಮಾಡುವ ಬಗ್ಗೆ.

ಉಲ್ಲೇಖ:-1. ಸರ್ಕಾರದ ಅಧಿಸೂಚನೆ ಸಂ:ಒಇ/130/ಪೊಸೇಇ/2017, ದಿ:18/09/2017.
2 ನೇಮಕಾತಿ ಅಧಿಸೂಚನೆ ಸಂ:13/ನೇಮಕಾತಿ/4/2017-18 ದಿ:14/12/2017, ಮತ್ತು 14/06/2018.
3. ಮಾನ್ಯ ಡಿ.ಐ.ಜಿ.ಪಿ. ಕೆ.ಎಸ್.ಆರ್.ಪಿ. ಬೆಂಗಳೂರು ರವರ ಕಛೇರಿಯ ತಾತ್ಕಾಲಿಕ ಆಯ್ಕೆ ಪಟ್ಟಿ ಸಂ:03/ಆರ್.ಪಿ.ಸಿ./ನೇಮಕಾತಿ/2017-18, ದಿನಾಂಕ:11/07/2018 ಮತ್ತು ಅಂತಿಮ ಆಯ್ಕೆ ಪಟ್ಟಿ ದಿನಾಂಕ:24/11/2018.
4. ಸರ್ಕಾರದ ಆದೇಶ ಸಂ:ಎಫ್.ಡಿ( ಎಸ್.ಪಿ.ಎಲ್)04/ಪಿಇಟಿ/2005, ದಿನಾಂಕ:31/03/2006.

*****

ಶ್ರೀಯುತ ಮಲ್ಲಿಕಾರ್ಜುನ ಬಸಪ್ಪ ಗಿಡಗಂಟಿ, ಮು//ಪೊ// ನಿಂಬಾಳ.ಬಿ.ಕೆ ತಾ// ಇಂಡಿ ಜಿ//ವಿಜಯಪುರ-**586211** ದೂ:ಸಂ:**7259820100** ಆದ ನೀವು ಉಲ್ಲೇಖ-3 ರ ಅಂತಿಮ ಆಯ್ಕೆ ಪಟ್ಟಿಯಲ್ಲಿ ನಿಮ್ಮ ಜೇಷ್ಠತೆಯ ಅನುಸಾರ 6ನೇ ಪಡೆಯ ರಿಸರ್ವ್ ಪೊಲೀಸ್ ಕಾನ್ಸ್‌ಟೇಬಲ್ (ಸ್ಥಳೀಯೇತರ) ಹುದ್ದೆಗೆ ಪ್ರವರ್ಗ 2ಎ (ಇತರೆ) ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದು, ನಿಮ್ಮನ್ನು ರೂ. **21400-500-22400-550-24600-600-27000-650-29600-750-32600-850-36000-950-39800-1100-42000** ರ ವೇತನ ಶ್ರೇಣಿಯಲ್ಲಿ ಗ್ರಾಹ್ಯವಾಗುವ ಇತರ ಭತ್ಯೆಗಳೊಂದಿಗೆ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಯ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ದಿನಾಂಕದಿಂದ ಅನ್ವಯವಾಗುವಂತೆ ಕೆಳಕಾಣಿಸಿದ ನಿಬಂಧನೆಗೊಳಪಟ್ಟು ನಿಮ್ಮನ್ನು ಕೆ.ಎಸ್.ಆರ್.ಪಿ. ಕಾನ್ಸ್‌ಟೇಬಲ್ ಹುದ್ದೆಗೆ ನೇಮಕ ಮಾಡಲಾಗಿದೆ.

1 ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ನೇಮಕಾತಿ ಕಾಯಿದೆ ಪ್ರಕಾರ ನೀವು ಬುನಾದಿ ತರಬೇತಿ ಪಡೆಯುವಿಕೆಗೆ ಒಳಪಟ್ಟಿರುತ್ತೀರಿ.

2 ಈ ನೇಮಕಾತಿಯು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1977 ರ ಪ್ರಕಾರ ನೀವು 2 1/2 ವರ್ಷಗಳ ಪರಿವೀಕ್ಷಣಾ ಅವಧಿಗೆ ಒಳಪಟ್ಟಿದೆ.

3 ನೀವು ಕರ್ನಾಟಕ ಪೊಲೀಸ್ ಅಧಿನಿಯಮ ಹಾಗೂ ನಿಯಮಾವಳಿಗಳ ನಿಬಂಧನೆಗಳಿಗೆ ಒಳಪಟ್ಟಿರುತ್ತೀರಿ. ಹಾಗೂ 8 ವರ್ಷಗಳ ಕಡ್ಡಾಯ ಸೇವೆ ಸಲ್ಲಿಸಬೇಕಲ್ಲದೆ ಕರ್ನಾಟಕ ರಾಜ್ಯದೊಳಗೆ ಹಾಗೂ ಅವಶ್ಯವಿದ್ದಲ್ಲಿ ಕರ್ನಾಟಕ ರಾಜ್ಯದ ಹೊರಗಡೆ ಸೇವೆಯನ್ನು ಸಲ್ಲಿಸಲು ಸಿದ್ಧರಿರಬೇಕು.

4 ನೀವು ಕರ್ತವ್ಯಕ್ಕೆ ಹಾಜರಾಗುವ ಸಮಯದಲ್ಲಿ ನಿಮ್ಮ ಮೂಲ ಪ್ರಮಾಣ ಪತ್ರಗಳನ್ನು ತಪ್ಪದೆ ಹಾಜರುಪಡಿಸತಕ್ಕದ್ದು.

5 ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಯು ಗ್ರೂಫ್ 'ಸಿ' ಸಮೂಹಕ್ಕೆ ಸೇರಿರುವುದರಿಂದ ಕನ್ನಡ ಮಾಧ್ಯಮದಲ್ಲಿ ಎಸ್.ಎಸ್.ಎಲ್.ಸಿ. ಯಲ್ಲಿ ಕನ್ನಡ ವಿಷಯವನ್ನು ಮೊದಲನೆ ಅಥವಾ ಎರಡನೇ ಭಾಷೆಯನ್ನಾಗಿ ತೆಗೆದುಕೊಂಡು ಉತ್ತೀರ್ಣತೆ ಹೊಂದುವುದು. ಕಡ್ಡಾಯವಾಗಿರುತ್ತದೆ. ಬೇರೆ ಭಾಷಾ ಮಾದ್ಯಮದಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದವರು ಪರೀಕ್ಷಾರ್ಥ ಅವಧಿಯೊಳಗೆ ಕೆ.ಪಿ.ಎಸ್.ಸಿ. ರವರು ನಡೆಸುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗತಕ್ಕದ್ದು. ಇಲ್ಲವಾದಲ್ಲಿ ನಿಮ್ಮನ್ನು ಸೇವೆಯಿಂದ ತೆಗೆದುಹಾಕಲಾಗುವುದು.,

6 ನೇಮಕಾತಿ ಆದೇಶ ನಿಮ್ಮ ಕೈ ಸೇರಿದ 15 ದಿನಗಳೊಳಗಾಗಿ ನೀವು ಕರ್ತವ್ಯಕ್ಕೆ ವರದಿ ಮಾಡತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಈ ನೇಮಕಾತಿ ಆದೇಶವನ್ನು ಯಾವುದೇ ರೀತಿಯ ಪೂರ್ವ ಸೂಚನೆ ನೀಡದೆ ರದ್ದುಪಡಿಸಲಾಗುವುದು.

7 ನೇಮಕಾತಿ ಹಾಗೂ ಸೇವಾ ಷರತ್ತುಗಳು ಆಗಿಂದಾಗ್ಗೆ ಜಾರಿಯಲ್ಲಿರುವ ನಿಯಮ ಹಾಗೂ ಆದೇಶಗಳ ಅಧೀನಕ್ಕೆ ಈ ನಿಮ್ಮ ನೇಮಕಾತಿಯು ಒಳಪಟ್ಟಿರುತ್ತದೆ.

8 ಸರ್ಕಾರವು ಆಗಿಂದಾಗ್ಗೆ ಹೊರಡಿಸುವ ಆದೇಶಗಳಿಗೆ ಮತ್ತು ನಿಯಮಗಳಿಗೆ ಹಾಗೂ ಇಲಾಖಾ ಮುಖ್ಯಸ್ಥರು ಆಗಿಂದಾಗ್ಗೆ ಹೊರಡಿಸುವ ಆದೇಶಗಳಿಗೆ ಈ ನಿಮ್ಮ ನೇಮಕಾತಿಯು ಒಳಪಟ್ಟಿರುತ್ತದೆ.

9 ಕರ್ನಾಟಕ ರಾಜ್ಯ ವಿಮಾ ಇಲಾಖೆಯ ಕಡ್ಡಾಯ ವಿಮಾದಾರರಾಗಿ ಪ್ರಥಮ ಮಾಸಿಕ ಕಂತು 981/- ರೂಗಳನ್ನು ತಪ್ಪದೆ ತುಂಬಿಸಿ ರಸೀದಿ ಹಾಜರುಪಡಿಸತಕ್ಕದ್ದು.

10 ಸ್ಥಳೀಯ ಎಸ್.ಬಿ.ಐ.ಸೂಪರ ಮಾರ್ಕೇಟ್ ಶಾಖೆ ಬ್ಯಾಂಕಿನಲ್ಲಿ ನಿಮ್ಮ ಹೆಸರಿನಲ್ಲಿ ಉಳಿತಾಯ ಖಾತೆ ತೆರೆದು ಪಾಸ್ ಬುಕ್, ಆಧಾರ ಕಾರ್ಡ್, ಪಾನ್‌ಕಾರ್ಡ್ ಮತ್ತು ಪಾಸ್‌ಪೋರ್ಟ್ ಸೈಜ್ ಫೋಟೋ 08 ಸಂಖ್ಯೆಗಳನ್ನು ಈ ಕಛೇರಿಗೆ ಹಾಜರುಪಡಿಸತಕ್ಕದ್ದು.

11 ಈ ನೇಮಕಾತಿ ಹೊಸ ಪಿಂಚಣಿ ಯೋಜನೆಗೆ ಒಳಪಟ್ಟಿರುತ್ತದೆ.

12 ನೀವು ಕರ್ತವ್ಯಕ್ಕೆ ಹಾಜರಾಗುವ ಸಮಯದಲ್ಲಿ ಕೆ.ಎಸ್.ಆರ್.ಪಿ. ಸ್ಪೆಷಲ್ ರಿಸರ್ವ್ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಯಲ್ಲಿ ಕನಿಷ್ಠ 5 ವರ್ಷಗಳ ಸೇವೆಯನ್ನು ಸಲ್ಲಿಸುವುದಾಗಿ ರೂ.500/- ಗಳ ಛಾಪಾ ಕಾಗದದ ಕರಾರು ಪತ್ರದ ಮೇಲೆ ರೂ.1,00,000/- ( ರೂಪಾಯಿ ಒಂದು ಲಕ್ಷಗಳು ಮಾತ್ರ) ಗಳ ಮುಚ್ಚಳಿಕೆ ಪ್ರಮಾಣ ಪತ್ರವನ್ನು **(Indemnity Bond)** ಸಲ್ಲಿಸುವುದು.

13 ಸೇವಾ ಜೇಷ್ಠತೆಯು ಅಂತಿಮ ನೇಮಕಾತಿ ಆಯ್ಕೆ ಪಟ್ಟಿಯ ಕ್ರಮ ಸಂಖ್ಯೆ ಸಮನಾಂತರವಾಗಿ ನಿರ್ಧಾರಕ್ಕೆ ಒಳಪಟ್ಟಿರುತ್ತದೆ.

14 ನಿಮ್ಮ ಸೇವಾ ಅವಧಿಯ ಯಾವುದೇ ಸಮಯದಲ್ಲಿ ನೀವು ಸಲ್ಲಿಸಿರುವ ದಾಖಲಾತಿಗಳಲ್ಲಿ ವ್ಯತಿರಿಕ್ತ ಕಂಡು ಬಂದಲ್ಲಿ ನಿಮ್ಮನ್ನು ಸೇವೆಯಿಂದ ವಜಾ ಮಾಡಲಾಗುವುದು.

15 ನೀವು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಾಗ ಈ ಕೆಳಕಾಣಿಸಿದವುಗಳನ್ನು ಕಡ್ಡಾಯವಾಗಿ ನಿಮ್ಮ ಜೊತೆಗೆ ತರುವುದು.

16 ಕರ್ತವ್ಯಕ್ಕೆ ವರದಿ ಮಾಡಿಕೊಂಡ ನಂತರದಿಂದ ಊಟ ತಿಂಡಿ ಇತ್ಯಾದಿಗಳಿಗಾಗಿ ನಿಗದಿಪಡಿಸುವ ಮೆಸ್ ಮುಂಗಡವನ್ನು ಮೆಸ್ ಮುಖ್ಯಸ್ಥರಿಗೆ ಆ ತಕ್ಷಣವೆ ಜಮಾ ಮಾಡುವುದು.

17 *ನಿಮ್ಮ ನೇಮಕಾತಿಯು ಎನ್.ಪಿ.ಎಸ್. ಸ್ಕೀಮ್‌ಗೆ ಒಳಪಟ್ಟಿದ್ದು, ನಿಮ್ಮ ನೇಮಕಾತಿ ಒಪ್ಪಿಗೆಯು ಮುಂದ್ವೆನ ಕೇಂದ್ರ ಕಛೇರಿಗೆ ಬರುವರೆಗಿನ ಅವಧಿಯವರೆಗೆ ನಿಮ್ಮ ವೇತನ ಡ್ರಾ ಮಾಡಲು ಅವಕಾಶವಿರದ ಕಾರಣ ಆ ಅವಧಿಯವರೆಗೆ ನಿಮಗೆ ಬೇಕಾಗುವ ಹಣಕಾಸು ವ್ಯವಸ್ಥೆಯನ್ನು ಸ್ವಂತವಾಗಿ ನೀವೇ ಮಾಡಿಕೊಳ್ಳುವುದು.*

ಕಮಾಂಡೆಂಟ್,
6ನೇ ಪಡೆ ಕೆ.ಎಸ್.ಆರ್.ಪಿ. ಕಲ್ಬುರಗಿ,

ಇವರಿಗೆ,
ಶ್ರೀಯುತ ಮಲ್ಲಿಕಾರ್ಜುನ ಬಸಪ್ಪ ಗಿಡಗಂಟಿ, ಮು//ಪೋ// ನಿಂಬಾಳ.ಬಿ.ಕೆ ತಾ// ಇಂಡಿ ಜಿ//ವಿಜಯಪೂರ-586211
ದೂ:ಸಂ:7259820100

<u>ಕರ್ತವ್ಯಕ್ಕೆ ಹಾಜರಾಗಲು ಬರುವ ಸಂದರ್ಭದಲ್ಲಿ ತರಬೇಕಾದ ಸಾಮಗ್ರಿಗಳು.</u>

1 2 ಜೊತೆ ಪಿ.ಟಿ.ಬನಿಯನ್ ಮತ್ತು ಖಾಕಿ ನಿಕ್ಕರ್.
2 ಒಂದು ಜೊತೆ ಕಂದು ಬಣ್ಣದ ಕ್ಯಾನ್‌ವಾಸ್ ಶೂ ಹಾಗೂ 2 ಜೊತೆ ಕಾಲುಚೀಲ
3 ಊಟದ ತಟ್ಟೆ ಹಾಗೂ ತಂಬಿಗೆ .
4 ಸಣ್ಣ ಹಾಸಿಗೆ ಹಾಗೂ ಸೊಳ್ಳೆ ಪರದೆ.

ಪ್ರತಿ:- ಸಿಬ್ಬಂದಿ(2) ಲೆಕ್ಕ-1 ,3 ಹೆಚ್.ಆರ್.ಎಮ್.ಎಸ್. ಶಾಖೆಗೆ ಸೂಕ್ತ ಕ್ರಮಕ್ಕಾಗಿ